ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ,
ನಂ.4 ಕಟ್ಟಡಗಳ ಉಪವಿಭಾಗ
ಲೋಕೋಪಯೋಗಿ ಇಲಾಖೆ, ಬೆಂಗಳೂರು–560 001.

ದೂರವಾಣಿ ಸಂಖ್ಯೆ: 080–22267585
ಇ–ಮೇಲ್: aeeno4bldg@gmail.com

# ಲೋಕೋಪಯೋಗಿ ಇಲಾಖೆ

ಸಂ: ಸಕಾಅ/ಕಉವಿ–4/ಸ.ಇಂ/ಕ.ದೃಢೀಕರಣ ಪತ್ರ/2022–23/180 ದಿನಾಂಕ: 06/06/2022

ರವರಿಗೆ,

Narayana Educational Society,
Narayana e-Techno School,
Vidyaranyapura,
Bangalore – 560097

ಮಾನ್ಯರೆ,

ವಿಷಯ: ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ

ಉಲ್ಲೇಖ: 1. ವರದಿಗಾರರು, Narayana Educational Society, Bengaluru ರವರ ಪತ್ರ ದಿನಾಂಕ:21.05.2021
2. ಸರ್ಕಾರದ ಸುತ್ತೋಲೆ ಸಂಖ್ಯೆ : ಲೋಇ 59 ಬಿಇಡಿ 2019 ಬೆಂಗಳೂರು ದಿ: 06.05.2022

* * *

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, Narayana Educational Society, Narayana e-Techno School, Vidyaranyapura Bangalore – 560097 ಇಲ್ಲಿನ ಶಾಲಾ ಕಟ್ಟಡವನ್ನು ಪರಿಶೀಲಿಸಿ ಶಾಲಾ ಕಟ್ಟಡಕ್ಕೆ ಸುರಕ್ಷತಾ ಪ್ರಮಾಣ ಪತ್ರ ನೀಡಲು ಕೋರಲಾಗಿರುತ್ತದೆ.

ಅದರಂತೆ, ದಿನಾಂಕ:26.05.2022 ರಂದು ಸಂಬಂಧಪಟ್ಟ ಸಹಾಯಕ ಇಂಜಿನಿಯರ್, ಸದರಿ ಸಂಸ್ಥೆಯ ಪ್ರಾಂಶುಪಾಲರಾದ ಶ್ರೀ. ವೆಂಕಟಚಲಂ, ಎ.ಜಿ.ಎಂ ಆದ ಎನ್.ಶಿವಕುಮಾರ್‌ರೆಡ್ಡಿ ರವರುಗಳು ಹಾಜರಿದ್ದು, ಇವರ ಸಮ್ಮೂಖದಲ್ಲಿ ಕಟ್ಟಡದ ಒಳಭಾಗ ಹಾಗೂ ಹೊರಭಾಗವನ್ನು ಪರಿವೀಕ್ಷಣೆ ಮಾಡಲಾಗಿ ವಿದ್ಯಾಸಂಸ್ಥೆಯ ಕಟ್ಟಡವನ್ನು, ಸರ್ವೆ ನಂ.72/15 ಖಾತಾ ಸಂ: 1550/72/15 ತಿಂಡ್ಲೂ ಗ್ರಾಮ, ವಿದ್ವಾರಣ್ಯಪುರ, ಬೆಂಗಳೂರು ಉತ್ತರ, ಬೆಂಗಳೂರು – 560097, 2322.56ಚ.ಮಿ. (25,000.00 ಚ.ಅ) ಜಾಗದಲ್ಲಿ ನಿರ್ಮಿಸಲಾಗಿರುತ್ತದೆ ಮತ್ತು ಕಟ್ಟಡದ ಮಾಲಿಕತ್ವ ಶ್ರೀ. ಎಂ.ಗೊವಿಂದಪ್ಪ S/o ದ್ವಿ. ಮೊಟಪ್ಪ, ನಂ.239, 1ನೇ ಮುಖ್ಯ ರಸ್ತೆ, ತಿಂದ್ಲು, ವಿದ್ವಾರಣ್ಯಪುರ ಅಂಚೆ, ಬೆಂಗಳೂರು–97 ರವರ ಹೆಸರನಲ್ಲಿರುತ್ತದೆ ಹಾಗೂ Narayana Educational Society, Bengaluru ರವರಿಗೆ ಲೀಜ್ ಆಧಾರದ ಮೇಲೆ ವಿದ್ಯಾಸಂಸ್ಥೆಯನ್ನು ನಡೆಸಲು ಅನುಮತಿ ನೀಡಲಾಗಿರುತ್ತದೆ. (ಕರಾರು ಒಪ್ಪಂದ ದಿನಾಂಕ: 13.02.2013). ಸದರಿ ವಿದ್ಯಾಸಂಸ್ಥೆಯು ಉಪಯೋಗಿಸುವ RCC ಕಟ್ಟಡದ ನೆಲ ಮಹಡಿಯೊಂದಿಗೆ ನಾಲ್ಕು ಅಂತಸ್ತಿನ (ನೆಲ, ಮೊದಲನೇ, ಎರಡನೇ, ಮೂರನೇ ಮತ್ತು ನಾಲ್ಕನೇ ಮಹಡಿ) ಕಟ್ಟಡವಾಗಿದ್ದು, ಪ್ಲಿಂತ್ ಏರಿಯ 507.15 ಚ.ಮಿ (5459.00 ಚ.ಅಡಿ) ಮತ್ತು ಒಟ್ಟು ಫ್ಲೋರ್ ಏರಿಯಾ 2028.60 ಚ.ಮಿ (21,835.85 ಚ.ಅಡಿ) ಆಗಿರುತ್ತದೆ. ಕಟ್ಟಡದ ಗೋಡೆಗಳನ್ನು ಕಾಂಕ್ರೀಟ್ ಬ್ಲಾಕ್‌ಗಳಿಂದ ನಿರ್ಮಿಸಿದ್ದು, ವಿಟ್ರಿಫೈಡ್ ನೆಲಹಾಸು, ಮರದ ಬಾಗಿಲುಗಳು ಮತ್ತು ಕಬ್ಬಿಣದ ಕಿಟಕಿ ಗಳಿಗೆ ಎಲ್ಯುಮಿನಿಯಂ ಶಟರ್ ಮತ್ತು ಕಬ್ಬಿನದ ಗ್ರಿಲ್ ಗಳನ್ನು ಅಳವಡಿಸಲಾಗಿರುತ್ತದೆ.

ಮುಂದುವರೆದು ಸದರಿ ಕಟ್ಟಡದ Structural Framework ಹಾಗೂ ಕಟ್ಟಡದ ಎಲ್ಲಾ ಮಹಡಿಗುಳು ಮತ್ತು ಪ್ರಮುಖ ಭಾಗಗಳನ್ನು ಪರಿಶೀಲಿಸಲಾಯಿತು. ಈ ಸಮಯದಲ್ಲಿ ತಳಪಾಯದ ವ್ಯವಸ್ಥೆಯಲ್ಲಿ Unequal settlement ಗಳಾಗಲೀ ಕಂಡು ಬಂದಿರುವುದಿಲ್ಲ ಮತ್ತು Beam ಗಳಲ್ಲಿ Deflection ಕಂಡುಬಂದಿರುವುದಿಲ್ಲ.

ಸದರಿ ಕಟ್ಟಡದ ಕಾಮಗಾರಿಯು 2013ನಲ್ಲಿ ನಿರ್ಮಾಣ ಕಾಮಗಾರಿಯನ್ನು ಮುಕ್ತಾಯಗೊಂಡಿರುತ್ತದೆ ಎಂದು ಶಾಲಾ ಕಟ್ಟಡ ಎ.ಜಿ.ಎಂ ಆದ ಎನ್.ಶಿವಕುಮಾರ್‌ರೆಡ್ಡಿ ರವರು ತಿಳಿಸಿರುತ್ತಾರೆ. ಸದರಿ ಕಟ್ಟಡದಗಳ ಆಯಸ್ಸು 05 ವರ್ಷಕ್ಕಿಂತ ಮೇಲ್ಪಟ್ಟಿದ್ದು ಸಕ್ಷಮ ಪ್ರಾಧಿಖಾರದಿಂದ ಪಡೆದ ಮಂಜೂರಾತಿ ನಕ್ಷೆಯು ಲಭ್ಯವಿರುವುದಿಲ್ಲವೆಂದು ತಿಳಸಿರುತ್ತಾರೆ. ಮತ್ತು ಕಟ್ಟಡಕ್ಕೆ ಸಂಬಂಧಪಟ್ಟ ಕಾಂಕ್ರೀಟ್ ಗ್ರೇಡ್, ಸ್ಟೀಲ್, ಸಿಮೆಂಟ್, ಮರಳು ಇತ್ಯಾದಿ ಕಟ್ಟಡ ನಿರ್ಮಾಣ ಕಾಮಗಾರಿಗೆ ಅಳವಡಿಸುವ ಸಾಮಾಗ್ರಿಗಳ ಪರೀಕ್ಷೆ ವರದಿಗಳು ಇಲ್ಲದಿರುವ ಕಾರಣದಿಂದ ಸರ್ಕಾರದ ಸುತ್ತೋಲೆಯಲ್ಲಿ ಸೂಚಿಸಿರುವಂತೆ ಎರಡು ರೀತಿಯ Non Destructive test ಗಳನ್ನು ಕೈಗೊಳ್ಳಲಾಗಿರುತ್ತದೆ.

ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಾಭಾರತಿ ಆವರಣ, ಮೈಸೂರು ರಸ್ತೆ, ಬೆಂಗಳೂರು ಇಲ್ಲಿ ಸಿವಿಲ್ ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟ್ ನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಡಾ॥ ಕಿರಣ್.ಟಿ, Asst. Professor, ಡಾ॥ ಎನ್.ಜಯರಾಮಪ್ಪ, Professor ಮತ್ತು ಡಾ॥ ಸಾದತ್ ಆಲಿ ಖಾನ್ ಯ್ಯೆ, Professor ರವರುಗಳು ಸದರಿ ಶಾಲಾ ಕಟ್ಟಡಕ್ಕೆ Non Destructive test ಅಡಿಯಲ್ಲಿ Rebound hammer test/Ultrasonic pulse velocity test ಗಳನ್ನು ನಿರ್ವಹಿಸಿ ಅದರ ವರದಿಗಳನ್ನು ಸಲ್ಲಿಸಿರುತ್ತಾರೆ ಹಾಗೂ ಫಲಿತಾಂಶವು ತೃಪ್ತಿಕರವಾಗಿರುತ್ತದೆ.

ಸದರಿ ವಿದ್ಯಾಸಂಸ್ಥೆಯವರು ಉಲ್ಲೇಖಿತ(2)ರ ಸರ್ಕಾರದ ಸುತ್ತೋಲೆ ಅನ್ವಯ ಕಟ್ಟಡ ಮೌಲ್ಯಾಪನ ಶುಲ್ಕ ರೂ. 5000.00 ಗಳನ್ನು ವಿಭಾಗ ಕಛೇರಿಗೆ ದಿನಾಂಕ: 06.06.2022 ರಂದು ಕಜಾನೆ-2 ಚಲಾನ್ ಸಂ. CR0622021600183451 ಮೂಲಕ ಪಾವತಿಸಿರುತ್ತಾರೆ.

ಈ ಮೇಲ್ಕಂಡ ಎಲ್ಲಾ ಅಂಶಗಳು ಹಾಗೂ ದಿ:26.05.2022ರ ಪರಿವೀಕ್ಷಣೆ, ಚೆಕ್‌ಲಿಸ್ಟ್‌ನ ವರದಿ ಹಾಗೂ ಸಲ್ಲಿಸಿರುವ ದಾಲೆಗಳ ಹಿನ್ನೆಲೆಯಲ್ಲಿ ಸದರಿ ಕಟ್ಟಡವು ಸುರಕ್ಷಿತವಾಗಿದೆ ಎಂದು ಅಭಿಪ್ರಾಯಿಸಲಾಯಿತು. ಅದರಿ ಕಟ್ಟಡವನ್ನು ನಿರ್ವಹಣೆ ಮಾಡುವ ಜವಾಬ್ದಾರಿಯು, ಸದರಿ ಶಾಲೆಯವರದಾಗಿರುತ್ತದೆ. ಹಾಗೂ ಈ ಪ್ರಮಾಣಪತ್ರವನ್ನು ಯಾವದೇ ಸಮಯದಲ್ಲಿ ಹಿಂಪಡೆಯುವ ಷರತ್ತಿಗೊಳಪಟ್ಟಿರುತ್ತದೆ. ಮುಂದುವರೆದು ಕಟ್ಟದ ಮಂಜೂರಾದ ನಕ್ಷೆಗೆ ವಿರುದ್ದವಾಗಿ ಯಾವುದಾದರು ಬದಲಾವಣೆ ಅಥವಾ ನಿರ್ಮಾಣ ಮಾಡಿದ್ದಲ್ಲಿ, ಸದರಿ ಪ್ರಮಾಣ ಪತ್ರವು ತನ್ನಿಂತಾನೆ ರದ್ದುಗೊಳ್ಳುವುದು. ಸದರಿ ಪ್ರಮಾಣ ಪತ್ರವನ್ನು Narayana Educational Society, Narayana e-Techno School, Vidyaranyapura Bangalore – 560097 ಶಾಲಾ ಕಟ್ಟಡವು ಶೈಕ್ಷಣಿಕ ಉದ್ದೇಶಕ್ಕಾಗಿ ಮಾತ್ರ ಬಳಸಬಹುದಾಗಿರುತ್ತದೆ. ಅದರಂತೆ, ಸದರಿ ಶಾಲಾ ಕಟ್ಟಡಕ್ಕೆ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲಾಗಿದೆ.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯಪಾಲಕ ಅಭಿಯಂತರರು,
ನಂ.4 ಕಟ್ಟಡಗಳ ಉಪವಿಭಾಗ, ಬೆಂಗಳೂರು.